# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. :33 ಪ್ರಾ.ಸಾ. : 15**

| | | |
|---|---|---|
| ಸಾಕ್ಷಿಯ ಹೆಸರು | : | ರಾಜೇಶ ಕಾಶಿನಾಥ ನಾಯ್ಕ |
| ತಂದೆಯ ಹೆಸರು | : | ಕಾಶಿನಾಥ ನಾಯ್ಕ |
| ವಯಸ್ಸು | : | 55 ವರ್ಷ |
| ಕೆಲಸ | : | ಕೃಷಿ |
| ವಾಸ | : | ಬಾಡ, ನಂದನಗದ್ದ, ಕಾರವಾರ |

**ದಿನಾಂಕಃ 22-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2016 ರಲ್ಲಿ ನಾನು ಕಾರವಾರದ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷನಾಗಿದ್ದೆನು. ಮೃತ ಪ್ರೇಮಕುಮಾರ ನನಗೆ ಗೊತ್ತು, ಆತನೂ ಸಹ ಕರ್ನಾಟಕ ರಕ್ಷಣಾ ವೇದಿಕೆಯಲ್ಲಿ, ಕಾರ್ಯಕರ್ತನಾಗಿದ್ದನು, ಆ ನಂತರ ಪ್ರೇಮಕುಮಾರ ಅಂಬೇಡ್ಕರ ಸೇನೆಯ ಸಂಘಟನೆಯಲ್ಲಿ ಜಿಲ್ಲಾಧ್ಯಕ್ಷನಾಗಿದ್ದನು. 1 ನೇ ಆರೋಪಿ ನನಗೆ ಗೊತ್ತು, ಆತ ಕಾರವಾದವನು ಹಾಗೂ ಮೃತ ಪ್ರೇಮಕುಮಾರನ ಗೆಳೆಯನಾಗಿದ್ದ ಮತ್ತು ಕಾರವರದ ಬಂದರಿನಲ್ಲಿ ಕೆಲಸ ಮಾಡುತ್ತಿದ್ದನು. ಹೀಗೆ ಸುಮಾರು 8 ವರ್ಷಗಳ ಹಿಂದೆ ಪ್ರೇಮಕುಮಾರನ ಕೊಲೆಯಾಗಿರುತ್ತದೆ ಎಂದು ದಿನಪತ್ರಿಕೆಯಲ್ಲಿ ಓದಿರುತ್ತೇನೆ, ಆದರೆ ಆತನನ್ನು ಯಾರು ಕೊಲೆ ಮಾಡಿದರು ಹಾಗೂ ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಪ್ರೇಮಕುಮಾರನು ಯಾವ ಕಾರಣಕ್ಕೆ ಕೊಲೆಯಾಗಿರುತ್ತಾನೆ ಎಂದು ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2. 1 ನೇ ಆರೋಪಿಯು ಕಾರವಾರ ಬಂದರಿನಲ್ಲಿ ಶಿಪ್ಪಿಂಗ್ ಏಜೆನ್ಸಿಯ ಮಾಲೀಕನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. 2018 ರ 1 ½ ವರ್ಷಗಳ ಹಿಂದೆ ಮೈಸೂರು ಮರ್ಕಂಟೈಲ್ ಕಂಪನಿ ಲಿಮಿಟೆಡ್, ಬೆಂಗಳೂರು ಇವರು ಬಂದರು ಇಲಾಖೆಗೆ ಸಂಬಂಧಪಟ್ಟಂತೆ ಬಂದರಿನಿಂದ ಅಲಿಗದ್ದಾ ಕಂಪನಿ ಇದ್ದ ಸ್ಥಳದ ವರೆಗೆ ಡಾಂಬರ ಸಪ್ಲೈ ಪೈಪ್ ಲೈನ್ ನ್ನು ಮಾಡುವ ಗುತ್ತಿಗೆಯನ್ನು ಪಡೆದುಕೊಂಡಿದ್ದು, ಸದರಿ ಪೈಪ್ ಲೈನ್ ನಲ್ಲಿ ಸಿವಿಲ್ ವರ್ಕ್ಸ ನ್ನು ಕಂಪನಿಯು ಕಾರವಾರ ಹಬ್ಬುವಾಡಾದ ಮಹಾಪ್ರಭು ಕಂಟ್ರಕ್ಷನ್ ಮಾಲೀಕರನಾದ ಆಸಿಮ್ ಅಧಿಕಾರಿ ಇವರಿಗೆ ನೀಡಿದ್ದು, ಸದರಿಯವರ ತರ್ಫೆನಿಂದ ಆ ಕೆಲಸವನ್ನು ನಾನು ಮಾಡಿಕೊಂಡಿದ್ದೆನು ಎಂದರೆ ಸರಿಯಲ್ಲ. ಸದರಿ ಗುತ್ತಿಗೆ ಕೆಲಸ ನನಗೆ ಸಿಗಲು 1 ನೇ ಆರೋಪಿಯು ನನಗೆ ಸಹಾಯ ಮಾಡಿದ್ದನು ಎಂದರೆ ಸರಿಯಲ್ಲ. ಸದರಿ ಗುತ್ತಿಗೆ ಕೆಲಸವು ನನಗೆ ಸಿಕ್ಕ ನಂತರ ಪ್ರೇಮಕಮಾರನು ತನ್ನ ಅಂಬೇಡ್ಕರ್ ಸೇನೆ ಸಂಘಟನೆಯಿಂದ ಬಂದರು ಇಲಾಖೆ, ಕಸ್ಟಮ್ಸ್ , ಅರಣ್ಯ ಇಲಾಖೆಗೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಈ ಬಗ್ಗೆ ತಕಾರಾರು ಸಲ್ಲಿಸಿದ್ದರಿಂದ, ಸದರಿ ಗುತ್ತಿಗೆ ಕೆಲಸವನ್ನು ಅರಣ್ಯ ಜಮೀನಿನಿಂದ ಹೊರತುಪಡಿಸಿ, ಹೆದ್ದಾರಿಯ ಮೇಲಿಂದ ಪೈಪ್ ಲೈನ್ ಕೆಲಸ ಮುಕ್ತಾಯವಾಗಿದ್ದು, ನಾವು ಸಿವಿಲ್ ವರ್ಕ್ಸ ಕೆಲಸವನ್ನು ಮಾಡಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಗುತ್ತಿಗೆ ಕೆಲಸ ನನಗೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ.

3. 2016 ನೇ ಸಾಲಿನಲ್ಲಿ 1 ನೇ ಆರೋಪಿಯು ಕಾರವಾರ ಶಿಪ್ಪಿಂಗ್ ಏಜೆನ್ಸಿ ಕಚೇರಿಯ ಹಿಂಬದಿಯಲ್ಲಿರುವ ಖುಲ್ಲಾ ಜಾಗದಲ್ಲಿ ಬಂದರು ಇಲಾಖೆಯಿಂದ ನೀರಿನ ಟ್ಯಾಂಕ್ ನಿರ್ಮಿಸುವ ಪ್ರಸ್ತಾಪ ಬಂದಿದ್ದು, ಆಗ 1 ನೇ ಆರೋಪಿಯ ಬಂದರು ಇಲಾಖೆಗೆ ಹೋಗಿ, ಕೆಲಸ ಗುತ್ತಿಗೆ ತೆಗೆದುಕೊಳ್ಳುವ ವಿಚಾರದಲ್ಲಿ ಮೌಖಿಕವಾಗಿ ಬಂದರು ಇಲಾಖೆಯ ಅಧಿಕಾರಿ ಹತ್ತಿರ ಮಾತನಾಡಿ ಬಂದಿದ್ದು, ಈ ವಿಷಯ ಪ್ರೇಮಕುಮಾರನಿಗೆ ಗೊತ್ತಾಗಿ, ಬಂದರು ಇಲಾಖೆಯಯ ಅಧಿಕಾರಿಯವರಿಗೆ ಭೇಟಿಯಾಗಿ ಹಾಗೂ ತನ್ನ ತಕರಾರು ಇರುವುದಾಗಿ ಹೇಳಿ, ಅಂಬೇಡ್ಕರ್ ಸೇನೆ ಸಂಘಟನೆ ವತಿಯಿಂದ ಅರ್ಜಿ ಮಾಡಿ, ನೀರಿನ ಟ್ಯಾಂಕ್ ನಿರ್ಮಿಸುವ ಕೆಲಸವನ್ನು ನಿಲ್ಲಿಸಿದ್ದು, ನಂತರ ಬಂದರು ಇಲಾಖೆಯಿಂದ 1 ನೇ ಆರೋಪಿಗೆ ಟೆಂಡರ್ ಆಗಿದ್ದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ಕಾರವಾರ ಬಂದರಿನಲ್ಲಿ ಹೂಳೆತ್ತುವ ಕೆಲಸ ನಡೆಸುತ್ತಿರುವ ಐ.ಎಸ್.ಡಿ.ಪಿ.ಎಲ್ ಕಂಪನಿ ಕೆಲಸಗಾರರಿಗೆ ಕೆಲಸದ ಸಮಯದಲ್ಲಿ ಯಾವುದೇ ಆಕಸ್ಮಿಕ ದೈಹಿಕ ಹಾನಿ ಉಂಟಾದಲ್ಲಿ ಅವರಿಗೆ ತಕ್ಷಣ ವೈದ್ಯಕೀಯ ಸೇವೆ ಸಿಗುವ ಬಗ್ಗೆ ಐ.ಎಸ್.ಡಿ.ಪಿ.ಎಲ್ ಕಂಪನಿ ವತಿಯಿಂದ 1 ನೇ ಆರೋಪಿಯು ಒಂದು ಅಂಬುಲೆನ್ಸ್ ನ್ನು ಇಟ್ಟಿದ್ದ, ಅದಕ್ಕೆ ಪ್ರೇಮಕುಮಾರನು 1 ನೇ ಆರೋಪಿಯು ತನ್ನ ಕಾರವಾರ ಶಿಪ್ಪಿಂಗ್ ಏಜೆನ್ಸಿಯ ಕಚೇರಿಯಲ್ಲಿ ಕ್ಲಿನಿಕ್ ನಡೆಸುತ್ತಿದ್ದಾನೆ ಅಂತಾ ಡಿ.ಎಚ್.ಓ ಕಾರವಾರವರ ಹತ್ತಿರ ದೂರಿದ್ದು, ಆರೋಗ್ಯ ಇಲಾಖೆಯಿಂದ ಅಧಿಕಾರಿ ಸಿಬ್ಬಂದಿಯವರು ಬಂದು ಪರಿಶೀಲಿಸಿ ಹೋಗಿದ್ದರು, ಅದಕ್ಕೆ 1 ನೇ ಆರೋಪಿಗೆ ಕೆಲಕಾಲ ಸಮಸ್ಯೆ ಎದುರಿಸಬೇಕಾಗಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

5. ಅದೇ ರೀತಿ 2018 ರ 4-5 ತಿಂಗಳಗಳ ಹಿಂದೆ ಗೋವಾ ಕಾರ್ಬನ್ ಕಂಪನಿಯ ಕಲ್ಲಿದ್ದಲನ್ನು ಕಾರವಾರ ಬಂದರಿನಿಂದ ಇಳಿಸಿಕೊಂಡು ಟ್ರಾನ್ಸ್ ಪೊರ್ಟ್ ಮಾಡುವ ಕೆಲಸವನ್ನು 1 ನೇ ಆರೋಪಿಯು ಪಡೆದುಕೊಂಡಿದ್ದು, ಆತ ಇನ್ನೇನು ಕೆಲಸ ಪ್ರಾರಂಭಿಸಬೇಕೆನ್ನುವಷ್ಟರಲ್ಲಿ ಪ್ರೇಮಕುಮಾರನು ಸದರಿ ಕಂಪನಿಯವರನ್ನು ಭೇಟಿಯಾಗಿ ಅದನ್ನು ಕಾರವಾರದಲ್ಲಿ ಇಳಿಸದಂತೆ ತಕರಾರು ತೆಗೆದು ಮತ್ತು ಅದರಿಂದ ಜನರಿಗೆ ತೊಂದರೆಯಾಗುತ್ತದೆ ಅಂತಾ ಅವರಿಗೆ ಹೆದರಿಸಿದ್ದರಿಂದ ಸದರಿ ಗೋವಾ ಕಾರ್ಬನ್ ಕಂಪನಿಯವರು ವಾಪಸ್ ಹೋಗಿದ್ದು, ಸದರಿ ಕೆಲಸ 1 ನೇ ಆರೋಪಿಯ ಕೈ ತಪ್ಪಿ ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದಲ್ಲದೇ ಕಾರವಾರದ ರಾಕ್ ಗಾರ್ಡನ್ ಗೆ ಕಲ್ಲುಗಳನ್ನು ಪೂರೈಸುವ ಕೆಲಸವನ್ನು 1 ನೇ ಆರೋಪಿಯು ಪಡೆದುಕೊಂಡು, ಮೊದಲ ಹಂತದ ಕಾಮಗಾರಿಗೆ ಹಾರವಾಡ ಮತ್ತು ಕುಮಟಾದಿಂದ ರೋಡ್ ಕಟಿಂಗ್ ಮಾಡುವಾಗ ಸಿಗುವ ಬಂಡೆ ಕಲ್ಲುಗಳನ್ನು ಪೂರೈಕೆ ಮಾಡಿದ್ದು, ಈ ವಿಷಯ ಪ್ರೇಮಕುಮಾರನಿಗೆ ಗೊತ್ತಾಗಿ ಆತ ತನ್ನ ವಕೀಲರ ಮೂಲಕ ಕಾರವಾರ ಬೀಚ್ ಏರಿಯಾ ಸಿ.ಆರ್.ಝಡ್ ವ್ಯಾಪ್ತಿಗೆ ಬರುವುದರಿಂದ ಸದರಿ ಸ್ಥಳದಲ್ಲಿ ಬಂಡೆ ಕಲ್ಲುಗಳನ್ನು ಹಾಕಿ, ಕಾಂಕ್ರಿಟ್ ಕಟ್ಟಡವನ್ನು ನಿರ್ಮಿಸದಂತೆ ತಕರಾರು ತೆಗೆದಿದ್ದರಿಂದ, ಅಲ್ಲಿಯೂ ಸಹ ಕೆಲಸ ನಿಂತು ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ.

6. 2018 ರ 2 ವರ್ಷಗಳ ಹಿಂದೆ ಅವರ್ಸಾದ ಸಕಲಬೇಣದಲ್ಲಿ ಡಾಂಬರ್ ಸಂಗ್ರಹ ಮಾಡಲು ಟ್ಯಾಂಕ್ ಗಳನ್ನು ಅಷ್ಟ ವಿನಾಯಕ ಡಾಂಬರ್ ಪ್ಲಾಂಟ್ ಅವರ್ಸಾ ಇವರು ಕಟ್ಟಿದ್ದು, ಅದಕ್ಕೆ ಪ್ರೇಮಕುಮಾರನು ಕಾರವಾರದ ಹಬ್ಬುವಾಡಾದಲ್ಲಿರುವ ಪರಿಸರ ಮಾಲಿನ್ಯ

ಅಧಿಕಾರಿಯವರಿಗೆ ತಕರಾರು ಇರುವ ಬಗ್ಗೆ ಪತ್ರವನ್ನು ಕಳುಹಿಸಿ, ಅದನ್ನು ಬಂದ್ ಮಾಡಲು ಪ್ರಯತ್ನಿಸಿದ್ದನು, ಆದ್ದರಿಂದ ಸದರಿ ಪ್ಲಾಂಟ್ ಗೆ ಸಂಬಂಧಪಟ್ಟಂತೆ ನಾನು ನಮ್ಮ ಸಂಘಟನೆಯಿಂದ ವಾಯುಮಾಲಿನ್ಯದ ಕ್ರಮ ಕೈಗೊಂಡ ಬಗ್ಗೆ ಮಾಹಿತಿಯನ್ನು ನೀಡುವಂತೆ ಪರಿಸರ ಮಾಲಿನ್ಯ ಅಧಿಕಾರಿಯವರಿಗೆ ಮಾಹಿತಿ ಹಕ್ಕು ಪತ್ರದಲ್ಲಿ ನಾನು ಮಾಹಿತಿಯನ್ನು ಕೇಳಿದ್ದೆ ಎಂದರೆ ಸರಿ. ನಂತರ 1 ನೇ ಆರೋಪಿಯು ನನ್ನ ಬಳಿ ಬಂದು ಪ್ರೇಮಕುಮಾರನಿಂದ ನನಗೆ ಬಹಳ ತೊಂದರೆಯಾಗಿ, ಸಮಸ್ಯೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೆನೆ, ಮಾನಸಿಕ ನೆಮ್ಮದಿ ಇಲ್ಲವಾಗಿದೆ ಹಾಗೂ ನನ್ನ ವ್ಯವಹಾದರಲ್ಲಿ ನನಗೆ ತುಂಬಾ ಹಾನಿಯಾಗಿದೆ, ಆದ್ದರಿಂದ ಅವನಿಗೆ ಒಂದು ಗತಿಯನ್ನು ಕಾಣಿಸಲು ನಿರ್ಧಾರಕ್ಕೆ ಬಂದಿದ್ದೇನೆ ಎಂದು ಹೇಳುತ್ತಿದ್ದನು ಎಂದರೆ ಸರಿಯಲ್ಲ.

7. ನಂತರದಲ್ಲಿ ದಿಃ 16-10-2018 ರಂದು ಪ್ರೇಮಕುಮಾರನು ಮದ್ಯಾಹ್ನ ಮನೆಯಿಂದ ಹೋದವನು ಮನೆಗೆ ಬಾರದೆ ಕಾಣೆಯಾಗಿದ್ದಾನೆ ಮತ್ತು ಆತನ ಪತ್ತೆಯ ಬಗ್ಗೆ ಆತನ ಮಾವ ಕಾರವಾರದ ಶಹರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಅಂತಾ ಹೇಳಿದ್ದು ಕೇಳಿ, ನಾನು ಬಂದರಿನಲ್ಲಿ ಆತನ ಬಗ್ಗೆ ವಿಚಾರಿಸಿದಾಗ ನನಗೆ ಸರಿಯಾದ ಮಾಹಿತಿ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯ ದುಷ್ಪ್ರೇರಣೆಯ ಮೇರೆಗೆ 2 ಮತ್ತು 3 ನೇ ಆರೋಪಿಗಳ ಸಹಾಯದಿಂದ ಪ್ರೇಮಕುಮಾರನನ್ನು ಉಳವಿಯ ಅರಣ್ಯದಲ್ಲಿ ಕೊಲೆ ಮಾಡಿದ ವಿಷಯ ನನಗೆ ಗೊತ್ತಾಯಿತು ಹಾಗೂ ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 14-12-2018 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಸಾಕ್ಷಿಯು ನಿರಾಕರಿಸಲ್ಪಟ್ಟ ಹೇಳಿಕೆಯ ಎರಡು ಭಾಗಗಳನ್ನು ನಿಪಿ-45/1 ಮತ್ತು 45/2 ಎಂದು ಗುರುತಿಸಲಾಯಿತು. ಪ್ರೇಮಕುಮಾರನ ಕೊಲೆಯಾಗಿರುವ ವಿಷಯ, ಆತನನ್ನು ಯಾರು ಕೊಲೆ ಮಾಡಿದರು ಹಾಗೂ ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಾರೆ ಎನ್ನುವ ಬಗ್ಗೆ ನಾನು ದಿನಪತ್ರಿಕೆಯಲ್ಲಿ ಓದಿ, ವಿಷಯ ತಿಳಿದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನಗೆ ಮೇಲೆ ಹೇಳಿದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

8. 1 ನೇ ಆರೋಪಿಗೆ ಹಾಗೂ ಪ್ರೇಮಕುಮಾರನಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಗೆಳೆಯರಾಗಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ